Sri K. MALLAPPA.—The condition was not imposed. The Bombay party applied that he would set up a plant with a capacity of six lakhs tons. The Mysore party filed an application for setting up a plant with a capacity of 300 tons only, which is not considered as standard or viable. In consideration of the offer made by the Bombay party, that application was recommended. Not only on the production capacity, but also on other capacities, the party was able to prove to the satisfaction of the Government. Sir, again I have to repeat that it is not the intention of Government to discourage the Mysore party. Even now, it is open to the Mysore party. I request that party to make necessary financial arrangements and also to secure technical collaboration arrangements and I assure him that the Government will try to secure a licence for him. But he has not done so.

Sri S. M. KRISHNA.—Has the industrial license been granted to the Bombay party ?

Sri K. MALLAPPA.—Yes, for a factory of 2,000 tons capacity.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಮ್ಮಲ್ಲಿ ಮಾತನಾಡುವಾಗ ಬೊಂಬಾಯಿ ಕಂಪೆನಿಯವರು ಎರಡು ಸಾವಿರ ಟನ್ ಉತ್ಪಾದನೆ ಮಾಡುತ್ತೇವೆಂದು ಹೇಳಿ ಅನಂತರ ಆ ತೊಂದರೆ ಇತ್ತು, ಈ ತೊಂದರೆ ಇತ್ತು ಎಂದು 300-600 ಟನ್ ಉತ್ಪತ್ತಿಗೆ ಇಳಿದರೆ ಆಗ ಏನು ಕ್ರಮವನ್ನು ತೆಗೆದು ಕೊಳ್ಳುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ಸರ್ಕಾರ ಅವರಿಗೆ ಲೆಟರ್ ಆಫ್ ಇಂಟೆಂಟ್ ಕೊಟ್ಟಿರುತ್ತದೆ. ಆ ಪಾರ್ಟಿಯವರು ಸಾಕಷ್ಟು ಕಾರ್ಯಾಚರಣೆ ಮಾಡದೆ ಹೋದರೆ ಅವರಿಗೆ ಕೊಟ್ಟಿರುವ ಲೆಟರ್ ಆಫ್ ಇಂಟೆಂಟ್ ಅನ್ನು ಹಿಂತೆಗೆದುಕೊಂಡು ಇನ್ನೊಂದು ಪಾರ್ಟಿಗೆ ಕೊಡುತ್ತಾರೆ. ಈಗ ಆ ಪಾರ್ಟಿಯವರು ಎಲ್ಲ ಏರ್ಪಾಡುಗಳನ್ನೂ ಮಾಡಿಕೊಂಡಿದ್ದಾರೆ. ಸುಣ್ಣದ ಕಲ್ಲು ದೊರೆಯುವ ಬಗ್ಗೆ ಒಂದು ಸರ್ವೆ ಮಾಡಿದ್ದಾರೆ. ಅದನ್ನು ಹೊರತೆಗೆಯುವುದಕ್ಕೆ ಅರ್ಜಿಯನ್ನು ಹಾಕಿದ್ದಾರೆ. ಒಂದು ಜರ್ಮನ್ ಪಾರ್ಟಿಯ ಜೊತೆಗೆ ಒಪ್ಪಂದ ಮಾಡಿಕೊಂಡು ಇಂಡಿಯಾ ಸರ್ಕಾರದ ಒಪ್ಪಿಗೆಗೆ ಅದನ್ನು ಕಳಿಸಿದ್ದಾರೆ. ಅವರು ಎಲ್ಲ ಸಲಕರಣೆಗಳನ್ನೂ ಮಾಡಿಕೊಂಡಿದ್ದಾರೆ.

Manufacture of Cement by the Mysore Cement, Limited, Ammasandra.

*Q.—263. Sri B. CHANNABYRE GOWDA (Hoskote).—

Will the Government be pleased to state:—

(*a*) the quantity of cement manufactured by the Mysore Cement, Ltd., Ammasandra, during 1963-64;

(*b*) whether any complaints have been received from the public that the cement manufactured by the Mysore Cement, Ltd., is of sub-standard quality and not fit for construction purposes and if so, the action taken on the same;

(*c*) whether the cement manufactured by the Mysore Cement, Ltd., has been used for Government buildings and if so, with what results ?

A.—Sri K. MALLAPPA (Minister for Industries and Commerce).—

(*a*) 71,171 metric tonnes.

(*b*) Yes. The matter was referred to the State Trading Corporation and the Government of India and it has since been reported that the cement manufactured by Mysore Cement, Ltd., is in accordance with the specifications prescribed by the Government of India.

(*c*) The use of this cement in concrete and other important works was forbidden by Public Works Department.

ಶ್ರೀ ಬಿ. ಚನ್ನಬೈರೇ ಗೌಡ.—ಸ್ವಾಮಿ, (ಅ) ಭಾಗಕ್ಕೆ ಉತ್ತರವಾಗಿ ಈ ಕಾರ್ಖಾನೆಯವರು ತಯಾರಿಸಿದ ಸಿಮೆಂಟು, ಭಾರತ ಸರ್ಕಾರದವರು ನಮೂದಿಸಿರುವ ವಿವರಗಳಿಗನುಸಾರವಾಗಿದೆ ಎಂದೂ (ಇ) ಭಾಗಕ್ಕೆ ಉತ್ತರವಾಗಿ ಲೋಕೋಪಯೋಗಿ ಇಲಾಖೆಯವರು ಇದರ ಉಪಯೋಗವನ್ನು ನಿಷೇಧಿಸಿದ್ದಾರೆಂದೂ ಹೇಳಿದ್ದಾರೆ. ಇವೆರಡರಲ್ಲಿ ಯಾವುದು ಸರಿ, ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ.—ಎರಡೂ ಸರಿ. ಮೊದಲು ಇದನ್ನು ದೊಡ್ಡ ಕೆಲಸಗಳಿಗೆ ಉಪಯೋಗಿಸಿದರೆ ತೊಂದರೆಯಾಗುತ್ತದೆಂದು ತಿಳಿದುಕೊಂಡು ಲೋಕೋಪಯೋಗಿ ಇಲಾಖೆಯವರು ಅದನ್ನು ಆರ್.ಸಿ.ಸಿ. ಕೆಲಸಗಳಿಗೆ ಉಪಯೋಗ ಮಾಡಬಾರದು ಎಂದು ಒಂದು ಸರ್ಕ್ಯುಲರ್ ಅನ್ನು ಅವರ ಅಧಿಕಾರಿಗಳಿಗೆ ಕಳಿಸಿದರು. ಆ ವಿಚಾರವನ್ನು ನಮ್ಮ ಸಿವಿಲ್ ಸಪ್ಲೈಸ್ ಇಲಾಖೆಗೂ ತಿಳಿಸಿದರು. ಆಮೇಲೆ ನಾವು ಎಸ್.ಟಿ.ಸಿ. ಮತ್ತು ಇಂಡಿಯಾ ಸರ್ಕಾರಕ್ಕೆ ತಿಳಿಸಿದೆವು. ಅವರು ಯೋಗ್ಯ ಪರಿಶೀಲನೆ ಮಾಡಿ, ಸಿಮೆಂಟ್ ಸ್ಯಾಂಪಲ್ ತರಿಸಿಕೊಂಡು ಪರೀಕ್ಷೆ ಮಾಡಿ ಅದರಲ್ಲಿ ಏನೂ ಲೋಪವಿಲ್ಲ ಎಂದು ತಿಳಿಸಿದರು. ಇತ್ತೀಚೆಗೆ ಲೋಕೋಪಯೋಗಿ ಇಲಾಖೆಯಿಂದಾಗಲೀ, ಖಾಸಗಿ ಜನರಿಂದಾಗಲೀ ಯಾವ ತರಹ ಪುಕಾರೂ ಈ ಸಿಮೆಂಟಿನ ಬಗ್ಗೆ ಬಂದಿಲ್ಲ.

Sri S. M. KRISHNA.—Was this deterioration in the quality of cement manufactured in Ammasandra not due to the mis-management and wilful mis-management of the person who was managing it and who was at the helm of affairs of the company ?

Sri K. MALLAPPA.—I am not in a position to say whether it was mis-management. It is purely a company matter and the management is not in the hands of the Government.

Sri K. S. SURYANARAYANA RAO.—What is the policy of the State Government in the matter of quality and efficient management of industries in the State, whether private or public sector ?

Sri K. MALLAPPA.—If there is any mis-management and the company affairs are very bad, the Central Government will take action under the Industries Development and Regulations Act. Regarding quality of the material, if there is any complaint, that complaint would be investigated and remedial measures would be suggested.

ಶ್ರೀ ಎಸ್. ಗೋಪಾಲ ಗೌಡ.—ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆಯಲ್ಲಿ ತಯಾರಾದಂಥ ಸಿಮೆಂಟ್ ಯೋಗ್ಯವಾಗಿಲ್ಲ, ಆದನ್ನು ಉಪಯೋಗಿಸಬಾರದು ಎಂದು ಲೋಕೋಪಯೋಗಿ ಇಲಾಖೆಯವರು ನಿಷೇಧಿಸಿದ ಮೇಲೆ ಕೈಗಾರಿಕಾ ಇಲಾಖೆಯವರು ಅದರಲ್ಲಿ ಏನು ದೋಷವಿದೆ ಎಂದು ಏನಾದರೂ ಪರಿಶೀಲನೆ ಮಾಡಿದಿರಾ, ಸ್ವಾಮಿ?

ಶ್ರೀ ಕೆ. ಮಲ್ಲಪ್ಪ.—ಈ ರೀತಿಯ ದೂರು ಬಂದ ನಂತರ ನಾನು ಆಗಲೇ ತಿಳಿಸಿದಂತೆ ಸಿಮೆಂಟ್ ಸ್ಯಾಂಪಲ್ ತೆಗೆದು ಸಿಮೆಂಟಿನ ವಿತರಣೆ ಮಾಡುವ ಎಸ್. ಟಿ. ಸಿ. ಅವರಿಗೂ ಕೇಂದ್ರ ಸರ್ಕಾರಕ್ಕೂ ಕಳಿಸಲಾಯಿತು. ಅದನ್ನು ಪರೀಕ್ಷೆ ಮಾಡಿ ಅದರಲ್ಲಿ ಏನೂ ದೋಷವಿಲ್ಲ ಎಂದು ಇಂಡಿಯಾ ಸರ್ಕಾರದವರೂ ಮತ್ತು ಎಸ್. ಟಿ. ಸಿ. ಅವರೂ ತಿಳಿಸಿದ್ದಾರೆ. ನಾನು ಮೊದಲೇ ತಿಳಿಸಿದಂತೆ ಈ ತನಕ ಈ ಸಿಮೆಂಟಿನ ವಿಷಯದಲ್ಲಿ ಯಾವ ತರಹ ದೋಷಾರೋಪಣೆಯೂ ಸರ್ಕಾರದ ಅವಗಾಹನೆಗೆ ಬಂದಿಲ್ಲ.